## 2017 ಕ.ತೀ.ವ 1283

### ಸನ್ಮಾನ್ಯ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ
### ಮತ್ತು
### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಿಮಠ್

ಡಾ|| ರಘುವೀರ್ ಪೈ -ವಿರುದ್ಧ- ಕರ್ನಾಟಕ ರಾಜ್ಯ ಮತ್ತು ಇತರರು*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಪ್ರತ್ಯರ್ಜಿದಾರ ಸಂ.5, ಸರ್ಕಾರಿ ಜಮೀನಿನ ಮೇಲೆ ಕಟ್ಟಡ ನಿರ್ಮಾಣಕಾರ್ಯದಲ್ಲಿ ನಿರತನಾಗಿದ್ದಾನೆಂಬ ಆಪಾದನೆ ಕುರಿತದ್ದಾಗಿದ್ದು, ಪ್ರತ್ಯರ್ಜಿದಾರ ಸಂ.5 ಸದರಿ ಆವರಣವನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ನಿರ್ಬಂಧಿಸಬೇಕೆಂದು ಕೋರಿರುವ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯಾಗಿರುತ್ತದೆ.

ರಿಟ್ ಅರ್ಜಿದಾರರು, ಪ್ರತ್ಯರ್ಜಿದಾರ ಸಂಖ್ಯೆ 5 ಇವನು ಕಾನೂನು ಬಾಹಿರವಾಗಿ, ಅಧಿಭೋಗವನ್ನು ಪಡೆದುಕೊಂಡು ಸರ್ಕಾರಿ ಜಮೀನಿನ ಮೇಲೆ ಕಟ್ಟಡವನ್ನು ನಿರ್ಮಿಸುತ್ತಿರುವ ನಿರ್ಮಾಣಕಾರ್ಯವನ್ನು ನಿರ್ಬಂಧಿಸುವಂಥ ನಿರ್ಬಂಧಕಾಜ್ಞೆಯ ಆದೇಶವನ್ನು ಕೋರಿರುತ್ತಾರೆ. ಅರ್ಜಿದಾರರು, ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ಮಾಡಿದ್ದಾಗ್ಯೂ ಕೂಡ, ನಿರ್ಬಂಧಕಾಜ್ಞೆಯ ಅಂಥ ಮಧ್ಯಂತರ ಆದೇಶವಿಲ್ಲದೆ, ಅವರು ಸರಿಪಡಿಸಲಾಗದ ನಷ್ಟವನ್ನು ಹಾಗೂ ಹಾನಿಯನ್ನು ಅನುಭವಿಸುತ್ತಾರೆಂಬುದರ ಅನ್ಯಥಾ ಅವರ ಪರವಾಗಿ ನಿರ್ಬಂಧಕಾಜ್ಞೆಯನ್ನು ನೀಡಬಾರದೆಂಬುದು ಕಾನೂನಿನಲ್ಲಿ ಇತ್ಯರ್ಥಗೊಂಡ ತತ್ವವಾಗಿರುತ್ತದೆ. ಅನುಕೂಲತೆ ಹಾಗೂ ಅನಾನುಕೂಲತೆಗಳ ಸಮತೋಲನವು ರಿಟ್ ಅರ್ಜಿದಾರರಿಗೆ ಉಂಟಾಗಿರುತ್ತದೆಂದು ಹಾಗೂ ಪ್ರತ್ಯರ್ಜಿದಾರ ನಂ.5ರ ವಿರುದ್ಧ ಇರುತ್ತದೆಂದು ನಮಗೆ ಮನವರಿಕೆಯಾಗದ ಹೊರತು ಮಧ್ಯಂತರ ಆದೇಶವನ್ನು, ಹೊರಡಿಸಲಾಗುವುದಿಲ್ಲವೆಂಬ ತತ್ವವಾಗಿರುತ್ತದೆ.

*ರಿಟ್ ಅರ್ಜಿ ಸಂಖ್ಯೆ: 56181/2014 (ಎಲ್‌ಬಿ-ಯುಸಿ/ಪಿಐಎಲ್), ದಿನಾಂಕ: 1ನೇ ಫೆಬ್ರವರಿ, 2016.

**ಪ್ರಸ್ತುತ ಪ್ರಕರಣದಲ್ಲಿ, ಈ ರಿಟ್ ಅರ್ಜಿಯು ಇತ್ಯರ್ಥದಲ್ಲಿರುವ ಸಮಯದಲ್ಲಿ, ಪ್ರತ್ಯರ್ಜಿದಾರ ಸಂ.5, ತಾವು ನಿರ್ಮಾಣ ಮಾಡಿರುವ ಮನೆಯ ಅಧಿಭೋಗವನ್ನು ತೆಗೆದುಕೊಂಡಲ್ಲಿ ಅರ್ಜಿದಾರರಿಗೆ ಯಾವುದೇ ತೊಂದರೆ, ಹಾನಿ ಉಂಟಾಗುವುದಿಲ್ಲ. ಅರ್ಜಿದಾರರು ರಿಟ್ ಅರ್ಜಿಯಲ್ಲಿ ಯಶಸ್ವಿಯಾದ್ದಲ್ಲಿ, ಪ್ರತ್ಯರ್ಜಿದಾರ ಸಂ.5 ಹೊರ ಹಾಕಬಹುದು ಹಾಗೂ ರಿಟ್ ಅರ್ಜಿದಾರರ ಅಧಿಭೋಗವು ರಿಟ್ ಅರ್ಜಿಯಲ್ಲಿ ಕೋರಿದ ಯಾವುದೇ ಪರಿಹಾರಗಳಿಗೆ ಪ್ರತಿಕೂಲವಾಗಿ ಬಾಧಕವುಂಟು ಮಾಡುವುದಿಲ್ಲ. ಇದಕ್ಕೆ ಪ್ರತಿಯಾಗಿ, ರಿಟ್ ಅರ್ಜಿಯು ವಿಫಲವಾದಲ್ಲಿ ಹಾಗೂ ಪ್ರತ್ಯರ್ಜಿದಾರ ಸಂ.5 ತಾವು ನಿರ್ಮಾಣ ಮಾಡಿದಂಥ ಕಟ್ಟಡವನ್ನು ಬಳಕೆ ಮಾಡುವುದನ್ನು ನಿರ್ಬಂಧಕಾಜ್ಞೆಯ ಮೂಲಕ ನಿಗ್ರಹಿಸಿದಲ್ಲಿ, ಪ್ರತ್ಯರ್ಜಿದಾರ ಸಂ.5 ಅನುಭವಿಸುವ ಅನಾನುಕೂಲವು ಅಪರಿಹಾರ್ಯವಾಗಿ ಉಳಿದುಬಿಡುತ್ತದೆ.**

**ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದೆ.**

ಅರ್ಜಿದಾರರ ಪರವಾಗಿ: ಶ್ರೀಮತಿ ಸಂಧ್ಯಾ ಯು. ಪ್ರಭು, ವಕೀಲರು.

1 ರಿಂದ 3ನೇ ಪ್ರತ್ಯರ್ಜಿದಾರರ ಪರವಾಗಿ: ನಿಲೋಫರ್ ಅಕ್ಬರ್, ಹೆಚ್ಚುವರಿ ಸರ್ಕಾರಿ ವಕೀಲರು

4ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಟಿ.ಐ. ಅಬ್ದುಲ್ಲಾ, ವಕೀಲರು.

5ನೇ ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಹರಿಕೃಷ್ಣ ಎಸ್ ಹೊಳ್ಳ, ವಕೀಲರು.

## 2015ರ ಸಂ. 1 ಮಧ್ಯಕಾಲೀನ ಅರ್ಜಿಯ ಮೇಲಿನ ಆದೇಶ

**ಹಂಗಾಮಿ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ**

ಪ್ರತ್ಯರ್ಜಿದಾರ ಸಂ.5, ಸರ್ಕಾರಿ ಜಮೀನಿನ ಮೇಲೆ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ನಿರತನಾಗಿದ್ದಾನೆಂಬ ಆಪಾದನೆ ಕುರಿತದ್ದಾಗಿದ್ದು, ಪ್ರತ್ಯರ್ಜಿದಾರ ಸಂ.5 ಸದರಿ ಆವರಣವನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ನಿರ್ಬಂಧಿಸಬೇಕೆಂದು ಕೋರಿರುವ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯಾಗಿರುತ್ತದೆ.

ರಿಟ್ ಅರ್ಜಿದಾರರು, ಪ್ರತ್ಯರ್ಜಿದಾರ ಸಂಖ್ಯೆ 5 ಇವನು ಕಾನೂನು ಬಾಹಿರವಾಗಿ, ಅಧಿಭೋಗವನ್ನು ಪಡೆದುಕೊಂಡು ಸರ್ಕಾರಿ ಜಮೀನಿನ ಮೇಲೆ ಕಟ್ಟಡವನ್ನು ನಿರ್ಮಿಸುತ್ತಿರುವ ನಿರ್ಮಾಣಕಾರ್ಯವನ್ನು ನಿರ್ಬಂಧಿಸುವಂಥ ನಿರ್ಬಂಧಕಾಜ್ಞೆಯ ಆದೇಶವನ್ನು ಕೋರಿರುತ್ತಾರೆ. ಅರ್ಜಿದಾರರು, ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ಮಾಡಿದ್ದಾಗ್ಯೂ ಕೂಡ, ನಿರ್ಬಂಧಕಾಜ್ಞೆಯ ಅಂಥ ಮಧ್ಯಂತರ ಆದೇಶವಿಲ್ಲದೆ, ಅವರು ಸರಿಪಡಿಸಲಾಗದ ನಷ್ಟವನ್ನು ಹಾಗೂ ಹಾನಿಯನ್ನು ಅನುಭವಿಸುತ್ತಾರೆಂಬುದರ ಅನ್ಯಥಾ ಅವರ ಪರವಾಗಿ ನಿರ್ಬಂಧಕಾಜ್ಞೆಯನ್ನು ನೀಡಬಾರದೆಂಬುದು ಕಾನೂನಿನಲ್ಲಿ ಇತ್ಯರ್ಥಗೊಂಡ ತತ್ವವಾಗಿರುತ್ತದೆ. ಅನುಕೂಲತೆ ಹಾಗೂ ಅನಾನುಕೂಲತೆಗಳ ಸಮತೋಲನವು ರಿಟ್ ಅರ್ಜಿದಾರರಿಗೆ ಉಂಟಾಗಿರುತ್ತದೆಂದು ಹಾಗೂ ಪ್ರತ್ಯರ್ಜಿದಾರ ನಂ.5ರ ವಿರುದ್ಧ ಇರುತ್ತದೆಂದು ನಮಗೆ ಮನವರಿಕೆಯಾಗದ ಹೊರತು ಮಧ್ಯಂತರ ಆದೇಶವನ್ನು, ಹೊರಡಿಸಲಾಗುವುದಿಲ್ಲ.

2. ಪ್ರಸ್ತುತ ಪ್ರಕರಣದಲ್ಲಿ, ಈ ರಿಟ್ ಅರ್ಜಿಯು ಇತ್ಯರ್ಥದಲ್ಲಿರುವ ಸಮಯದಲ್ಲಿ, ಪ್ರತ್ಯರ್ಜಿದಾರ ಸಂ.5, ತಾವು ನಿರ್ಮಾಣ ಮಾಡಿರುವ ಮನೆಯ ಅಧಿಭೋಗವನ್ನು ತೆಗೆದುಕೊಂಡಲ್ಲಿ ಅರ್ಜಿದಾರರಿಗೆ ಯಾವುದೇ ತೊಂದರೆ, ಹಾನಿ ಉಂಟಾಗುವುದಿಲ್ಲ. ಅರ್ಜಿದಾರರು ರಿಟ್ ಅರ್ಜಿಯಲ್ಲಿ ಯಶಸ್ವಿಯಾದ್ದಲ್ಲಿ, ಪ್ರತ್ಯರ್ಜಿದಾರ ಸಂಖ್ಯೆ 5 ಹೊರ ಹಾಕಬಹುದು ಹಾಗೂ ರಿಟ್ ಅರ್ಜಿದಾರರ ಅಧಿಭೋಗವು ರಿಟ್ ಅರ್ಜಿಯಲ್ಲಿ ಕೋರಿದ ಯಾವುದೇ ಪರಿಹಾರಗಳಿಗೆ ಪ್ರತಿಕೂಲವಾಗಿ ಬಾಧಕವುಂಟು ಮಾಡುವುದಿಲ್ಲ. ಇದಕ್ಕೆ ಪ್ರತಿಯಾಗಿ, ರಿಟ್ ಅರ್ಜಿಯು ವಿಫಲವಾದಲ್ಲಿ ಹಾಗೂ ಪ್ರತ್ಯರ್ಜಿದಾರ ಸಂ.5 ತಾವು ನಿರ್ಮಾಣ ಮಾಡಿದಂಥ ಕಟ್ಟಡವನ್ನು ಬಳಕೆ ಮಾಡುವುದನ್ನು ನಿರ್ಬಂಧಕಾಜ್ಞೆಯ ಮೂಲಕ ನಿಗ್ರಹಿಸಿದಲ್ಲಿ, ಪ್ರತ್ಯರ್ಜಿದಾರ ಸಂ.5 ಅನುಭವಿಸುವ ಅನಾನುಕೂಲವು ಅಪರಿಹಾರ್ಯವಾಗಿ ಉಳಿದು ಬಿಡುತ್ತದೆ.

ಆದ್ದರಿಂದ, ಮಧ್ಯಂತರ ಪರಿಹಾರದ ಅರ್ಜಿಯನ್ನು ತಿರಸ್ಕರಿಸಲಾಗಿರುತ್ತದೆ.

ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.